
1

# ಸ್ಕೈ ಡೈವಿಂಗ್


2

1 ಕಟ್ಟಡದ ಮೇಲಿನಿಂದ ಹಾರಿದ ತಕ್ಷಣ ತೆಗೆದ ಚಿತ್ರ
2 ಬುರ್ಜ್ ಖಲೀಫಾ ಕಟ್ಟಡದ ಪೂರ್ಣ ಎತ್ತರ ತೋರಿಸುವ ಚಿತ್ರ
3 ಪ್ಯಾರಾಶೂಟ್ ತೆರೆದುಕೊಂಡಾಗ ನಿಧಾನವಾಗಿ ಕೆಳಗಿಳಿಯುತ್ತಿರುವುದು

3



ಜಗತ್ತಿನ ಅತಿ ಎತ್ತರದ ಕಟ್ಟಡ ಬುರ್ಜ್ ಖಲೀಫಾ ದುಬೈನಲ್ಲಿ ಇತ್ತೀಚೆಗಷ್ಟೇ ಉದ್ಘಾಟನೆಯಾಗಿದೆ. ಆಗಲೇ ಇಬ್ಬರು ಸಾಹಸಿಗರು ಅದರ ಮೇಲಿಂದ ಸ್ಕೈ ಡೈವಿಂಗ್ ಮಾಡಿ ದಾಖಲೆ ಸ್ಥಾಪಿಸಿದ್ದಾರೆ. ಯುಎಇ ಯ ರಾಷ್ಟ್ರೀಯ ಚಾಂಪಿಯನ್ ನಾಸೆರ್ ಅಲ್ ನಯಾದಿ ಮತ್ತು ಸ್ಕೈ ಡೈವಿಂಗ್‌ನ ವಿಶ್ವ ಚಾಂಪಿಯನ್ ಓಮರ್ ಅಲ್ ಗೆಲಾನ್.

ಇತ್ತೀಚೆಗೆ ಇವರಿಬ್ಬರೂ ಬುರ್ಜ್ ಖಲೀಫಾ ಕಟ್ಟಡದ ಮೇಲಿಂದ ಹಾರಿ ಹತ್ತು ಸೆಕೆಂಡುಗಳ ಕಾಲ ಪ್ಯಾರಾಶೂಟ್ ಇಲ್ಲದೇ ಹಾಗೆಯೇ ಬೀಳುತ್ತಿದ್ದು, ನಂತರ ಪ್ಯಾರಾಶೂಟ್ ತೆರೆದು ನಿಧಾನವಾಗಿ ತೇಲುತ್ತಾ ಕೆಳಗಿಳಿದರು. ಇದು ಕಟ್ಟಡ ಉದ್ಘಾಟನೆಯಾದ ನಂತರ ಅಧಿಕೃತವಾಗಿ ನಡೆದ ಸಾಹಸ ಪ್ರದರ್ಶನ.

ಆದರೆ ಎಲ್ಲ ಸಾಹಸಿಗಳೂ ದಾಖಲೆ ಬರೆಯುವವರಿಗಾಗಿ ಕಾಯೋದಿಲ್ಲ. ಈ ದಾಖಲೆ ಬರೆಯುವ ಮುಂಚೆಯೇ, 2008ರ ನವೆಂಬರ್ 21ರಂದು ಇಬ್ಬರು ಅನಾಮಿಕರು ನಿರ್ಮಾಣ ಪೂರ್ಣಗೊಳ್ಳದ ಇದೇ ಕಟ್ಟಡದಿಂದ ಸ್ಕೈ ಡೈವಿಂಗ್ ಸಾಹಸವನ್ನು ಅನಧಿಕೃತವಾಗಿ ಮಾಡಿದ್ದರು. ಕಟ್ಟಡ ಪೂರ್ಣಗೊಳ್ಳದ್ದರಿಂದ ಅವರ ಸಾಹಸ ಪೂರ್ಣ ಎತ್ತರದ್ದಲ್ಲ ಎಂದು ಪರಿಗಣಿಸಲಾಗಿತ್ತು. ದಾಖಲೆಯಲ್ಲೂ ಸ್ಥಾನ ಪಡೆಯಲಿಲ್ಲ. ಈಗ ನಾಸೆರ್ ಮತ್ತು ಓಮರ್‌ನ ಸಾಹಸ ಅಧಿಕೃತವಾಗಿ ವಿಶ್ವದ ಅತಿ ಎತ್ತರದ ಮಾನವ ನಿರ್ಮಿತ ಕಟ್ಟಡದಿಂದ ಹಾರಿದ ಸಾಹಸವೆಂದು ದಾಖಲಾಗಿದೆ.

■ ಜಯಶ್ರೀ ಎಲ್. ಜವಳಿ